**CC 2109/2017**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಹೊಸಪೇಟೆ.**

**ಸಿಸಿ ನಂಬರ್** 2109/2017

**ಸಿ ಡಬ್ಲೂ** -9

**ಪಿ ಡಬ್ಲೂ** - 8

**ಸಾಕ್ಷಿಯ ಹೆಸರು** - **ಹೊನ್ನೂರಮ್ಮ**
**ಗಂಡನ ಹೆಸರು** - **ಅಂಜಿನಪ್ಪ**
**ವಯಸ್ಸು** - 60 **ವರ್ಷಗಳು**
**ಉದ್ಯೋಗ** - **ಕೂಲಲಿ ಕೆಲಸ**
**ವಾಸಸ್ಥಳ** - **ಮಲಪನಗುಡಿ**

**ಸಾಕ್ಷಿಯನ್ನು ದಿನಾಂಕಃ** 18-09-2025 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎ. ಪಿ. ಪಿ. ಅವರಿಂದ**

ನನಗೆ ರವಿ ಕುಮಾರ ಎಂಬ ವ್ಯಕ್ತಿ ಸಾಲ ಕೊಡಿಸುತ್ತೇನೆ ಎಂದು ಹೇಳಿ ನನ್ನ ಆಧಾರ ಕಾರ್ಡ ಮತ್ತು ಬ್ಯಾಂಕ್ ದಾಖಲೆಯ ನಕಲುಗಳನ್ನು ತೆಗೆದುಕೊಂಡು ಹೋಗಿದ್ದ. ನಂತರ ನನಗೆ ಯಾವುದೇ ಸಾಲ ಕೊಟ್ಟಿರುವುದಿಲ್ಲ. ಆ ವ್ಯಕ್ತಿ ಆಗಿನಿಂದ ಪತ್ತೆಯಾಗಿರುವುದಿಲ್ಲ.

ನಂತರ ಬಜಾಜ್ ಪೈನಾನ್ಸ್ ರವರು ನಮ್ಮ ಮನೆಯ ಹತ್ತಿರ ಬಂದು ನಾನು ಅವರಿಂದ ಸಾಲ ಪಡೆದು ಸಾಮಾನುಗಳನ್ನು ಖರೀದಿಸಿರುತ್ತೇನೆ ಎಂದು ಹೇಳಿದಾಗ ನನಗೆ ನನ್ನ ಹೆಸರಿನಲ್ಲಿ ಸಾಲ ಮಂಜೂರಾಗಿರುವುದು ಗೊತ್ತಾಗಿರುತ್ತದೆ. ನಾವು ಸಾಲ ಪಡೆದಿರುವುದಿಲ್ಲ ಎಂದು ಬಜಾಜ್ ಕಂಪನಿಯವರಿಗೆ ತಿಳಿಸಿರುತ್ತೇನೆ. ನಂತರ ನಾವುಗಳು ಮೋಸ ಮಾಡಿದ್ದ ರವಿಕುಮಾರ ವಿರುದ್ದ ಪ್ರಕರಣ ದಾಖಲಿಸಿರುತ್ತೇವೆ. ನಾನು, ಚಾಸಾ **-6, 12** ಮತ್ತು ಇನ್ನೊಬ್ಬ ಹೆಂಗಸು ಆ ರೀತಿ ರವಿ ಕುಮಾರ ರವರಿಗೆ ದಾಖಲೆಗಳನ್ನು ಕೊಟ್ಟಿದ್ದೇವು.

**ಪಾಟೀ ಸವಾಲು ಆರೋಪಿ ಪರ ಶ್ರೀ ಹೆಚ್. ಆರ್., ವಕೀಲರಿಂದಃ** ಇಲ್ಲಾ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.